**ಪೋಷಕರೇ ಗಮನಿಸಿ**

# ಉತ್ತಮ ಹವ್ಯಾಸಗಳ ಮೂಲಕ ಚಾರಿತ್ರ್ಯನಿರ್ಮಾಣ



**ಮ**ಕ್ಕಳಲ್ಲಿ ನೆಲೆಗೊಂಡಿರುವ ‘ಅಂತರ್ಗತ ಪ್ರವೃತ್ತಿ’ಗಳು ಅವರ ಚಾರಿತ್ರ್ಯವನ್ನು ರೂಪಿಸುತ್ತವೆ. ಇವುಗಳನ್ನೇ ಸಂಸ್ಕಾರಗಳು ಎಂದು ಕರೆಯುತ್ತಾರೆ. ಆದರೆ ಈ ಸಂಸ್ಕಾರಗಳನ್ನು ಉತ್ತಮವನ್ನಾಗಿ ಮಾರ್ಪಡಿಸಲು ಖಂಡಿತ ಸಾಧ್ಯ. ನಮ್ಮ ಪ್ರತಿಯೊಂದು ಆಲೋಚನೆ, ಮಾತುಕತೆ ಮತ್ತು ಕ್ರಿಯೆ ಕೂಡ ನಮ್ಮ ಮನಸ್ಸಿನಲ್ಲಿ ಒಂದು ಮುದ್ರೆಯನ್ನು ಬೀರುತ್ತದೆ. ಈ ಮುದ್ರೆಗಳನ್ನೇ ನಾವು ಸಂಸ್ಕಾರಗಳೆಂದು ಕರೆಯುತ್ತೇವೆ. ಈ ಸಂಸ್ಕಾರಗಳ ಒಟ್ಟುಮೊತ್ತವೇ ಒಬ್ಬ ವ್ಯಕ್ತಿಯ ಚಾರಿತ್ರ್ಯವನ್ನು ನಿರ್ಧರಿಸುತ್ತದೆ. ನಮ್ಮ ನಡೆನುಡಿ, ಜೀವನದ ಬಗ್ಗೆ ನಮ್ಮ ದೃಷ್ಟಿಕೋನ, ನಾವು ಆರಿಸಿಕೊಳ್ಳುವ ಮೌಲ್ಯಗಳು ಹಾಗೂ ಒಟ್ಟಾರೆ ನಮ್ಮ ವ್ಯಕ್ತಿತ್ವವನ್ನು ಗೊತ್ತುಮಾಡುವುದು ಈ ಚಾರಿತ್ರ್ಯವೇ. ಸ್ವಾಮಿ ವಿವೇಕಾನಂದರು ರಾಜಯೋಗದ ತಮ್ಮ ಪ್ರವಚನದಲ್ಲಿ ಈ ಅಂಶವನ್ನು ಹೀಗೆ ವಿವರಿಸುತ್ತಾರೆ:

“ಮನಸ್ಸನ್ನು ಒಂದು ಕೊಳಕ್ಕೆ ಹೋಲಿಸುವುದಾದರೆ, ಅದರ ಮೇಲೆ ಏಳುವ ಪ್ರತಿಯೊಂದು ಅಲೆಯೂ, ಅದು ಅಡಗಿದ ನಂತರ, ಸಂಪೂರ್ಣವಾಗಿ ನಾಶವಾಗದೆ, ಒಂದು ಕುರುಹನ್ನು ಅದರ ಮೇಲೆ ಬಿಡುತ್ತದೆ. ಮತ್ತು ಮುಂದೆ ಅದೇ ತರಹದ ಅಲೆಗಳೇಳುವ ಸಂಭವವನ್ನು ಸೂಚಿಸುತ್ತದೆ. ಮತ್ತೆ ಅಲೆಯನ್ನು ಎಬ್ಬಿಸುವ ಸಾಮರ್ಥ್ಯವುಳ್ಳ ಆ ಕುರುಹಿಗೆ ‘ಸಂಸ್ಕಾರ’ವೆಂದು ಹೆಸರು. ನಮ್ಮ ದೇಹದ ಪ್ರತಿಯೊಂದು ಚಲನೆಯೂ ಸೇರಿ, ನಾವು ಮಾಡುವ ಪ್ರತಿಯೊಂದು ಕಾರ್ಯವೂ, ನಾವು ಚಿಂತಿಸುವ ಪ್ರತಿಯೊಂದು ಆಲೋಚನೆಯೂ, ಮನಸ್ಸಿನ ಮೇಲೆ ಅಂತಹ ಒಂದು ಕುರುಹನ್ನು ಅಂದರೆ ಮುದ್ರೆಯನ್ನು ಒತ್ತಿಬಿಡುತ್ತದೆ. ಈ ಕುರುಹು ಬಾಹ್ಯತಃ ವ್ಯಕ್ತವಾಗದಿದ್ದರೂ ಆಂತರಿಕವಾಗಿ ನಮ್ಮ ಪ್ರಜ್ಞೆಗೆ ಬಾರದೆಯೇ ಕೆಲಸ ಮಾಡುತ್ತಿರುತ್ತದೆ. ಪ್ರತಿಯೊಂದು ಕ್ಷಣದಲ್ಲಿಯೂ ನಾವೇನಾಗಿರುತ್ತೇವೆಯೋ ಅದು ನಮ್ಮ ಮನಸ್ಸಿನ ಮೇಲೆ ಹಿಂದೆ ಅಂಕಿತವಾದ ಒಟ್ಟು ಕುರುಹುಗಳ ಅಥವಾ ಸಂಸ್ಕಾರಗಳ ಫಲವೇ ಆಗಿದೆ” (ಕೃತಿಶ್ರೇಣಿ, ೧:೫೪).

ಹಾಗಾದರೆ, ಮಕ್ಕಳಲ್ಲಿ ಕಂಡು ಬರುವ ಕೆಟ್ಟ ಹವ್ಯಾಸಗಳಿಗೆ ಪರಿಹಾರವೇನು? ಒಳ್ಳೆಯ ಹವ್ಯಾಸಗಳನ್ನು ಬೆಳೆಸುವುದು. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: “ಎಲ್ಲಾ ಕೆಟ್ಟ ಅಭ್ಯಾಸಗಳನ್ನೂ ಒಳ್ಳೆಯ ಅಭ್ಯಾಸದ ಬಲದಿಂದ ನಿಗ್ರಹಿಸಬೇಕು. ಎಡೆಬಿಡದೆ ಒಳ್ಳೆಯದನ್ನು ಮಾಡುತ್ತ ಮಾಡುತ್ತ ಹೋಗಿ; ಒಳ್ಳೆಯದನ್ನು ಆಲೋಚಿಸುತ್ತ ಇರಿ. ನಮ್ಮ ಕೀಳು ಸ್ವಭಾವವನ್ನು ಅಡಗಿಸುವುದಕ್ಕೆ ಇದೊಂದೇ ದಾರಿ. ಯಾರನ್ನೂ ಕೆಟ್ಟವರೆಂದು ಹೇಳಬೇಡಿ. ಏಕೆಂದರೆ ಅವರು ಕೆಲವು ಅಭ್ಯಾಸಗಳ ಬಲದಿಂದ ಒಂದು ಶೀಲ ಅಥವಾ ಚಾರಿತ್ರ್ಯವನ್ನು ಪಡೆದಿದ್ದಾರೆ. ಈ ಶೀಲವನ್ನು ನಾವು ಬೇರೆಯ ಉತ್ತಮ ಅಭ್ಯಾಸ ಬಲದಿಂದ ಮಾತ್ರ ತಿದ್ದಬಹುದು. ಶೀಲವೆಂದರೆ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವ ಅಭ್ಯಾಸ. ಪುನಃ ಪುನಃ ಅಭ್ಯಾಸದಿಂದ ಮಾತ್ರ ನಮ್ಮ ಶೀಲವನ್ನು ತಿದ್ದಿಕೊಳ್ಳಬಹುದು” (ಕೃತಿಶ್ರೇಣಿ, ೧:೩೮೯).


ನಿಮ್ಮ ಮಕ್ಕಳಲ್ಲಿ ಚಾರಿತ್ರ್ಯವನ್ನು ನಿರ್ಮಾಣ ಮಾಡುವ ಮೂಲಭೂತ ವಿಧಾನವು ಈ ಸತ್ಯದ ಮೇಲೆ ಆಧರಿಸಿದೆ. ಅದೇನೆಂದರೆ, “ಚಾರಿತ್ರ್ಯವೆಂದರೆ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವ ಹವ್ಯಾಸಗಳು. ಹೀಗೆ ಪುನರಾವರ್ತನೆಗೊಂಡ ಹವ್ಯಾಸಗಳು ಮಾತ್ರವೇ ಚಾರಿತ್ರ್ಯದಲ್ಲಿ ಗುಣಾತ್ಮಕ ಪರಿವರ್ತನೆಯನ್ನು ತರಬಲ್ಲವು.” ಆದ್ದರಿಂದ ನೀವು ನಿಮ್ಮ ಮಕ್ಕಳನ್ನು ಸಕಾರಾತ್ಮಕವಾದ ಹವ್ಯಾಸಗಳನ್ನು ಬೆಳೆಸಿಕೊಳ್ಳುವಂತೆ ಉತ್ತೇಜಿಸಬೇಕು. ಅವುಗಳನ್ನು ನಿಮ್ಮ ಮಕ್ಕಳು ಅದೆಷ್ಟು ಅರಗಿಸಿಕೊಳ್ಳುತ್ತಾರೆ ಎನ್ನುವುದು, ನೀವು ಅವರಿಗೆ ನೀಡುವ ಸತತ ಉತ್ತೇಜನದ ಮೇಲೆ ಅವಲಂಬಿತವಾಗಿದೆ. ಅಷ್ಟೇ ಅಲ್ಲ, ಅವುಗಳನ್ನು ನಿಮ್ಮ ಜೀವನದಲ್ಲಿಯೂ ನೀವು ಅದೆಷ್ಟು ಪ್ರಮಾಣದಲ್ಲಿ ಬೆಳೆಸಿಕೊಂಡಿದ್ದೀರಿ ಎನ್ನುವುದರ ಮೇಲೆ ಕೂಡ ಆಧರಿಸಿದೆ.

**ಆದ್ದರಿಂದ ಇಂದೇ ಮಕ್ಕಳಲ್ಲಿ ಉತ್ತಮ ಹವ್ಯಾಸಗಳನ್ನು ಬೆಳೆಸಲು ಆರಂಭಿಸೋಣವೇ?**

**(ಮುಂದಿನ ತಿಂಗಳು : *ಮಕ್ಕಳಲ್ಲಿ ಬೆಳೆಸಬೇಕಾದ ಉತ್ತಮ ಹವ್ಯಾಸಗಳು*)**

# ವಿಶಿಷ್ಟಾದ್ವೈತದರ್ಶನ–ಒಂದು ಪರಿಚಯ

**ಎ. ನರಸಿಂಹನ್**



### ವೇದಾಂತ ದರ್ಶನ ವಿಶಿಷ್ಟಾದ್ವೈತ

ವೇದಾಂತದರ್ಶನಗಳಲ್ಲಿ ಪ್ರಮುಖವಾದ ದರ್ಶನ 'ವಿಶಿಷ್ಟಾದ್ವೈತ ದರ್ಶನ'. ಈ ದರ್ಶನವು ವೇದಗಳಲ್ಲೇ ಪ್ರತಿಪಾದಿತವಾಗಿದೆ. 'ವಿಶಿಷ್ಟಾದ್ವೈತ' ಎಂಬ ಪದವನ್ನು ಪ್ರಾಯಶಃ ಭಗವದ್ ರಾಮಾನುಜಾಚಾರ್ಯರ 'ವೇದಾರ್ಥ ಸಂಗ್ರಹ' ಎಂಬ ಗ್ರಂಥದ ವ್ಯಾಖ್ಯಾನದಲ್ಲಿ ಶ್ರೀ ಸುದರ್ಶನ ಸೂರಿಗಳು ಮೊದಲಿಗೆ ಉಪಯೋಗಿಸಿರುವುದು ಕಂಡು ಬರುತ್ತದೆ. ಸಕಲ ವೇದವಾಕ್ಯಗಳಿಗೂ ಮುಖ್ಯಾರ್ಥವನ್ನೇ ಹೇಳಿ, ೧. ಈಶ್ವರನೂ ಜೀವನೂ ಜಗತ್ತೂ ಭಿನ್ನರೂ ಅಹುದು, ಅಭಿನ್ನರೂ ಅಹುದು, ೨. ಜೀವನಿಗೂ ಜಗತ್ತಿಗೂ ಈಶ್ವರನೊಡನೆ ಬಿಡಿಸಲಾಗದ ಒಂದು ಸಂಬಂಧವಿದೆ ಎಂದು, ದ್ವೈತ ಮತ್ತು ಅದ್ವೈತ ಎರಡನ್ನೂ ಸಮನ್ವಯಗೊಳಿಸಿ, ಜೀವ ಮತ್ತು ಜಗತ್ತುಗಳನ್ನು ವಿಶೇಷಣವಾಗುಳ್ಳ ಸರ್ವಶರೀರಿಯಾದ ಈಶ್ವರನೊಬ್ಬನೇ ತತ್ತ್ವವೆಂದು ಪ್ರತಿಪಾದಿಸುವ ದರ್ಶನವೇ 'ವಿಶಿಷ್ಟಾದ್ವೈತ ದರ್ಶನ'. ಈ ದರ್ಶನವನ್ನು ಭಗವದ್ರಾಮಾನುಜರು ಸರ್ವತೋಮುಖವಾಗಿ ಸ್ಥಾಪಿಸಿದ್ದರಿಂದ ಈ ದರ್ಶನಕ್ಕೆ 'ಶ್ರೀರಾಮಾನುಜ ದರ್ಶನ' ಎಂದೂ ಕರೆಯುತ್ತಾರೆ.

### ವಿಶಿಷ್ಟಾದ್ವೈತದ ಪ್ರಾಚೀನತೆ

ಅತ್ಯಂತ ಪ್ರಾಚೀನವೆಂದು ಪರಿಗಣಿಸಲ್ಪಟ್ಟಿರುವ ಋಗ್ವೇದದಲ್ಲಿಯೇ ಈ ದರ್ಶನದ ಪ್ರಧಾನಾಂಶಗಳನ್ನು ನಾವು ಗುರುತಿಸಬಹುದು. ಅದಲ್ಲದೆ ಎಲ್ಲ ಉಪನಿಷತ್ತುಗಳಲ್ಲಿ, ಬ್ರಹ್ಮಸೂತ್ರಗಳಲ್ಲಿ, ಸ್ಮೃತಿ, ಇತಿಹಾಸ, ಪುರಾಣಗಳಲ್ಲಿ ಮತ್ತು ಆಗಮಗಳಲ್ಲಿ ಈ ದರ್ಶನದ ಪ್ರತಿಪಾದನೆಯನ್ನು ನಾವು ನೋಡಬಹುದು. ಇದಲ್ಲದೆ, ಶ್ರೀಮದ್ ರಾಮಾಯಣವು 'ಶರಣಾಗತಿಶಾಸ್ತ್ರ' ವೆಂದೇ ಪ್ರಸಿದ್ಧವಾಗಿದೆ.

### ವಿಶಿಷ್ಟಾದ್ವೈತದಲ್ಲಿ ಪ್ರಮಾಣಗಳು

ವಿಶಿಷ್ಟಾದ್ವೈತ ದರ್ಶನದಲ್ಲಿ **ಪ್ರತ್ಯಕ್ಷ**, **ಅನುಮಾನ** ಮತ್ತು **ಶಬ್ದ** ಎಂಬ ಮೂರು ಪ್ರಮಾಣಗಳನ್ನು ಅಂಗೀಕರಿಸಲಾಗಿದೆ. ಶಬ್ದ ಪ್ರಮಾಣವೆಂದರೆ ವೇದಗಳು. ಈ ಸಿದ್ಧಾಂತಕ್ಕೆ ವೇದಗಳೇ ಪರಮ ಪ್ರಮಾಣಗಳು. ವೇದಗಳು ಪೂರ್ಣವಾದ ಪ್ರಮಾಣಗಳೆಂದು ಭಾವಿಸಿ, ಎಲ್ಲ ವೇದವಾಕ್ಯಗಳಿಗೂ ಮುಖ್ಯಾರ್ಥವನ್ನೇ ಹೇಳಿರುವುದು ಈ ಸಿದ್ಧಾಂತದ ವೈಶಿಷ್ಟ್ಯವಾಗಿದೆ. ಹಾಗೆಯೇ ವೇದಗಳಿಗೆ ವಿರುದ್ಧವಲ್ಲದ ಹಾಗೂ ವೇದಾರ್ಥಗಳನ್ನು ವಿಶದೀಕರಿಸುವ ಭಗವದ್ಗೀತೆ, ವಿಷ್ಣುಪುರಾಣ, ಭಾಗವತ ಪುರಾಣ, ಶ್ರೀಮದ್ರಾಮಾಯಣ, ಮಹಾಭಾರತ, ಆಳ್ವಾರರುಗಳ ದಿವ್ಯಪ್ರಬಂಧಗಳು ಮುಂತಾದ ಸ್ಮೃತಿ, ಪುರಾಣ, ಇತಿಹಾಸಗಳನ್ನು ಸಹ ಪ್ರಮಾಣಗಳನ್ನಾಗಿ ಇಲ್ಲಿ ಸ್ವೀಕರಿಸಲಾಗಿದೆ. ಯಾವ ಸ್ಮೃತಿ ಇತಿಹಾಸ ಪುರಾಣಗಳು ವೇದಗಳಿಗೆ ವಿರುದ್ಧವಾಗಿಲ್ಲವೋ, ಅವೆಲ್ಲವೂ ಪ್ರಮಾಣಗಳೆಂದು ಈ ಸಿದ್ಧಾಂತದ ನಿಲುವು. ಇದಲ್ಲದೆ ಶ್ರೀಮನ್ನಾರಾಯಣನೇ ಉಪದೇಶಿಸಿದುದೆಂದು ಪ್ರಸಿದ್ಧವಾದ ಪಾಂಚರಾತ್ರ ಆಗಮಗಳೂ ಸಹ ಈ ದರ್ಶನದಲ್ಲಿ ಪ್ರಮಾಣಗಳಾಗಿವೆ.

**ವಿಶಿಷ್ಟಾದ್ವೈತದ ಪ್ರಕಾರ ಭಗವಂತನೇ ಸರ್ವವೂ ಆಗಿದ್ದು, ಜೀವಿಗಳು, ಜಗತ್ತು –ಅವನ ಅಂಶಗಳು. ಈ ಸಿದ್ಧಾಂತವು ಮುಕ್ತಿಗೆ ಭಗವಂತನಲ್ಲಿ ಭಕ್ತಿ ಮತ್ತು ಪ್ರಪತ್ತಿಗಳೇ ಮುಖ್ಯಸಾಧನಗಳೆಂದು ಸಾರುತ್ತದೆ. ಇದನ್ನು ತಾತ್ತ್ವಿಕವಾಗಿ ವಿವರಿಸಿರುವ ಬೆಂಗಳೂರು ವಾಸಿಗಳಾದ ಲೇಖಕರು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸಲಹೆಗಾರರು, ಕಾರ್ಪರೇಟ್ ತರಬೇತುಗಾರರು. ಇವರು ಸಾಂಪ್ರದಾಯಿಕ ವೇದಾಧ್ಯಯನಶೀಲರು ಮತ್ತು ವಿಶಿಷ್ಟಾದ್ವೈತ ತತ್ತ್ವದ ಮೇರು ಪಂಡಿತರು. ಹಾಗೂ ಇವರು ಹಲವು ಕೃತಿಗಳ ಲೇಖಕರು ಮತ್ತು ಉತ್ತಮ ಪ್ರವಚನಕಾರರು.**

### ವಿಶಿಷ್ಟಾದ್ವೈತದರ್ಶನದ ಪ್ರವರ್ತನಕಾರರು

ಈ ದರ್ಶನಕ್ಕೆ ಭಕ್ತಶಿರೋಮಣಿಗಳಾದ ಆಳ್ವಾರರುಗಳು, ದ್ರಮಿಡ, ಟಂಕ, ಗುಹದೇವ, ಕಪರ್ದಿ, ಭಾರುಚಿ, ನಾಥಮುನಿಗಳು, ಯಾಮುನಾಚಾರ್ಯರು, ಭಗವದ್ರಾಮಾನುಜರು ಮೊದಲಾದವರು ಪ್ರಧಾನ ಆಚಾರ್ಯರುಗಳು. ಆಳ್ವಾರರುಗಳು ಅನುಗ್ರಹಿಸಿರುವ ದಿವ್ಯಪ್ರಬಂಧಗಳು 'ದ್ರಾವಿಡವೇದ'ಗಳೆಂದೇ ಪ್ರಸಿದ್ಧವಾಗಿವೆ. ಶ್ರೀಮದ್ ಯಾಮುನಾಚಾರ್ಯರು **ಸಿದ್ಧಿತ್ರಯ, ಆಗಮ ಪ್ರಾಮಾಣ್ಯ, ಗೀತಾರ್ಥ ಸಂಗ್ರಹ, ಸ್ತೋತ್ರರತ್ನ** ಮುಂತಾದ ಪ್ರೌಢಗ್ರಂಥಗಳನ್ನು ರಚಿಸಿದ್ದಾರೆ. ಭಗವದ್ರಾಮಾನುಜರು ಬ್ರಹ್ಮಸೂತ್ರಗಳಿಗೆ **'ಶ್ರೀಭಾಷ್ಯ'** ವೆಂದು ಪ್ರಖ್ಯಾತವಾದ ವಿಸ್ತಾರವಾದ ಭಾಷ್ಯವನ್ನೂ, **ವೇದಾರ್ಥ ಸಂಗ್ರಹ, ಭಗವದ್ಗೀತಾ ಭಾಷ್ಯ, ವೇದಾಂತದೀಪ, ವೇದಾಂತ ಸಾರ, ಗದ್ಯ ತ್ರಯ ಮತ್ತು ನಿತ್ಯಗ್ರಂಥ**ಗಳನ್ನೂ ರಚಿಸಿ ವಿಶಿಷ್ಟಾದ್ವೈತ ದರ್ಶನದ ಸ್ಥಾಪನಾಚಾರ್ಯರೆಂದು ಪ್ರಸಿದ್ಧರಾದರು. ಮುಂದೆ ವೇದಾಂತ ದೇಶಿಕರು,

ಪಿಳ್ಳೈ ಲೋಕಾಚಾರ್ಯರು, ಮನವಾಳ ಮಾಮುನಿಗಳು, ರಂಗ ರಾಮಾನುಜರು ಮುಂತಾದ ಆಚಾರ್ಯರು ಅನೇಕ ವ್ಯಾಖ್ಯಾನ ಗಳು ಮತ್ತು ಸ್ವತಂತ್ರ ಗ್ರಂಥಗಳ ರಚನೆಯ ಮೂಲಕ ಈ ಸಿದ್ಧಾಂತವನ್ನು ಮತ್ತೂ ಭದ್ರಪಡಿಸಿದರು.

### ವಿಶಿಷ್ಟಾದ್ವೈತದರ್ಶನದಲ್ಲಿ ಪ್ರಮೇಯಗಳು

**'ಅಶೇಷ ಚಿದಚಿತ್ ಪ್ರಕಾರಂ ಬ್ರಹ್ಮ ಏಕಮೇವ ತತ್ತ್ವಮ್'** – ಚೇತನ ಮತ್ತು ಅಚೇತನಗಳಿಂದ ವಿಶಿಷ್ಟನಾದ ಈಶ್ವರನೊಬ್ಬನೇ ತತ್ತ್ವವೆಂದು ವೇದಾಂತ ದೇಶಿಕರು ತಿಳಿಸುತ್ತಾರೆ. ಬ್ರಹ್ಮನನ್ನು ತಿಳಿದರೇನೇ ಮೋಕ್ಷಪ್ರಾಪ್ತಿಯು ಎಂಬುದನ್ನು ಭಗವದ್ರಾಮಾ ನುಜರು **'ತಾಪತ್ರಯಾತುರೈಃ ಅಮೃತತ್ವಾಯ, ಸ ಏವ ಜಿಜ್ಞಾಸ್ಯಃ'** – 'ಸಂಸಾರದ ತಾಪತ್ರಯದಲ್ಲಿ ಸಿಲುಕಿರುವ ಜೀವರು ಅದನ್ನು ಬಿಡಿಸಿಕೊಂಡು ಮೋಕ್ಷಪಡೆಯಲು ತಿಳಿಯಬೇಕಾದುದು ಬ್ರಹ್ಮ ನನ್ನೇ' ಎಂದು ಶ್ರೀಭಾಷ್ಯದಲ್ಲಿ ತಿಳಿಸುತ್ತಾರೆ. ಆದ್ದರಿಂದ ಚೇತನನ ಸ್ವರೂಪ ಸ್ವಭಾವಗಳೇನು, ಅಚೇತನದ ಸ್ವರೂಪ ಸ್ವಭಾವಗಳೇನು ಮತ್ತು ಬ್ರಹ್ಮನ ಸ್ವರೂಪ ಸ್ವಭಾವಗಳೇನು ಎಂಬುದನ್ನು ಒಟ್ಟಾರೆ ತಿಳಿಸುವುದೇ ಈ ಸಿದ್ಧಾಂತದ ಉದ್ದೇಶ. ಇದರೊಂದಿಗೆ ಈ ಮೂರು ತತ್ತ್ವಗಳಿಗೂ ಇರುವ ಸಂಬಂಧವನ್ನೂ ತಿಳಿಯಬೇಕು.

### ಜಡ ಅಥವಾ ಅಚೇತನ ತತ್ತ್ವ

ಅಚೇತನ ತತ್ತ್ವವು ಮುಖ್ಯವಾಗಿ **ಪ್ರಕೃತಿ** ಮತ್ತು **ಕಾಲ** ಎಂಬುದಾಗಿ ಎರಡು ಬಗೆಯಾಗಿದೆ. ಅಚೇತನ ತತ್ತ್ವವಾದ ಪ್ರಕೃತಿಯ ಪರಿಣಾಮಗಳೇ ಪಂಚಭೂತಗಳು, ಐದು ಕರ್ಮೇಂದ್ರಿಯ ಗಳು, ಐದು ಜ್ಞಾನೇಂದ್ರಿಯಗಳು ಮತ್ತು ಅಂತರಿಂದ್ರಿಯವಾದ ಮನಸ್ಸು. **ಅಚೇತನಾ ಪರಾರ್ಥಾ ಸಾ ನಿತ್ಯಾ ಸತತವಿಕ್ರಿಯಾ । ತ್ರಿಗುಣಾ ಕರ್ಮಿಣಾಂ ಕ್ಷೇತ್ರಂ ಪ್ರಕೃತೇ ರೂಪಮುಚ್ಯತೇ ॥** ಎಂಬುದಾಗಿ ಇದರ ಸ್ವರೂಪವು ಹೇಳಲ್ಪಟ್ಟಿದೆ. ಇದರ ಅರ್ಥ ಹೀಗಿದೆ: ಈ ಅಚೇತನ ತತ್ತ್ವವು ಜಡವಾದುದು, ಸತ್ವ–ರಜಸ್ಸು–ತಮಸ್ಸು ಎಂಬ ಮೂರು ಗುಣಗಳುಳ್ಳದ್ದು ಮತ್ತು ಮತ್ತೊಬ್ಬರ ಅನುಭವಕ್ಕಾಗಿಯೇ ಇರು ವಂತಹದು. ಈ ಮೂಲ ಪ್ರಕೃತಿಯೆಂಬುದು ಸತ್ಯವಾದ ಪದಾರ್ಥ ವಾಗಿದ್ದು ಈಶ್ವರನ ಅಧೀನದಲ್ಲಿಯೇ ಪ್ರವೃತ್ತವಾಗುವುದು. ಇದಕ್ಕೆ ಸ್ವತಂತ್ರ ಪ್ರವೃತ್ತಿಯಿಲ್ಲ. ಇದರ ವಿಕಾರಗಳೇ ಪಂಚಭೂತಗಳು, ಪಂಚ ಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು ಮತ್ತು ಮನಸ್ಸು. ಈಶ್ವರಸಂಕಲ್ಪಕ್ಕನುಸಾರವಾಗಿ ಇವು ಜೀವರುಗಳಿಗೆ ವಿಧವಿಧವಾದ ದೇಹಗಳಾಗಿ ಪರಿಣಮಿಸುತ್ತವೆ.

ಕಾಲವೆಂಬುದು ನಿತ್ಯವಾದ, ತ್ರಿಗುಣರಹಿತವಾದ ಅಚೇತನ ತತ್ತ್ವ. ಇದು ಸಹ ಪರಮಾತ್ಮನ ಅಧೀನದಲ್ಲಿದ್ದು, ನಿತ್ಯವಿಭೂತಿ ಯಲ್ಲಿಯೂ ಇರುತ್ತದೆ.

### ಅಜಡ ತತ್ತ್ವ

ಅಜಡ ತತ್ತ್ವದಲ್ಲಿ **ಪ್ರತ್ಯಕ್** ಮತ್ತು **ಪರಾಕ್** ಎಂಬುದಾಗಿ ಎರಡು ಬಗೆಯಿದೆ. ಪ್ರತ್ಯಕ್ ತತ್ತ್ವವೆಂದರೆ ತನ್ನನ್ನು ತಾನು ತಿಳಿಯುವ ಸಾಮರ್ಥ್ಯವುಳ್ಳ ಈಶ್ವರ ಮತ್ತು ಜೀವರುಗಳು. ಪರಾಕ್ ತತ್ತ್ವವೆಂದರೆ ತನ್ನನ್ನು ತಾನು ತಿಳಿಯಲಾರದ, ಆದರೆ ತಾನು ಮತ್ತೊಂದನ್ನು ಪ್ರಕಾಶಿಸುವ ತತ್ತ್ವ. ಇದರಲ್ಲಿ **ನಿತ್ಯವಿಭೂತಿ** ಮತ್ತು **ಧರ್ಮಭೂತಜ್ಞಾನ** ಎಂದು ಎರಡು ಬಗೆಯಿದೆ. ನಿತ್ಯವಿಭೂತಿ ಯೆಂಬುದು ಶುದ್ಧಸತ್ವದಿಂದಾದುದು. ಇದಕ್ಕೇ ಪರಮಪದ ಅಥವಾ ವೈಕುಂಠ ಎಂದೂ ಹೆಸರು. ಇದು ಪರಮಾತ್ಮನ ನಿತ್ಯ ವಾಸಸ್ಥಾನ ವಾಗಿದೆ. ಇದು ಸ್ವಯಂಪ್ರಕಾಶವಾದ ತತ್ತ್ವ.

ಧರ್ಮಭೂತಜ್ಞಾನವೆಂಬುದು ಜೀವಾತ್ಮರ ಗುಣವಾದ ಜ್ಞಾನ. ಜೀವಾತ್ಮರು ಜ್ಞಾನಸ್ವರೂಪರೂ ಮತ್ತು ಜ್ಞಾನಗುಣರೂ ಆಗಿದ್ದಾರೆಂಬುದು ವಿಶಿಷ್ಟಾದ್ವೈತದ ಅಭಿಪ್ರಾಯ. ಇದಕ್ಕೆ **'ನ ವಿಜ್ಞಾತುಃ ವಿಜ್ಞಾತೇಃ ವಿಪರಿಲೋಪೋ ವರ್ತತೇ'** – "ತಿಳಿಯು ವವನಾದ (ವಿಜ್ಞಾತೃವಾದ) ಜೀವನಿಗೆ ಯಾವಾಗಲೂ (ಸುಷುಪ್ತಿ ಯಲ್ಲೂ ಸಹ) ವಿಜ್ಞಾನದ (ತಿಳಿಯುವುದರ) ನಾಶವಿಲ್ಲ (ಜ್ಞಾತೃತ್ವವು ಇದ್ದೇ ಇರುತ್ತದೆ); ಏಕೆಂದರೆ ಅದು ನಿತ್ಯವಾದದ್ದು." ಮುಂತಾದ ಅನೇಕ ಶ್ರುತಿಪ್ರಮಾಣಗಳಿವೆ. ತನಗೆ ಆಶ್ರಯವಾದ ಜೀವನಿಗೆ ಜ್ಞಾನವು ಇತರ ವಿಷಯಗಳನ್ನು ತೋರಿಸುತ್ತದೆ. ಇದು ಕರ್ಮದಿಂದ ಸಂಕುಚಿತವಾಗಿದ್ದು, ಮೋಕ್ಷಾವಸ್ಥೆಯಲ್ಲಿ ಪೂರ್ಣವಾಗಿ ವಿಕಾಸ ವಾಗಿರುವುದು.

ಜೀವಾತ್ಮರು ಅನೇಕರು. ಅವರು ಜ್ಞಾನಾನಂದಸ್ವರೂಪರು ಮತ್ತು ಅಣುಪರಿಮಾಣವುಳ್ಳವರು, ಎಂದರೆ ಬಹಳ ಸೂಕ್ಷ್ಮ ರಾದವರು. ಇವರೇ ಅನಾದಿಯಾದ ಕರ್ಮಪ್ರವಾಹದಲ್ಲಿ ಸಿಲುಕಿ ಸಂಸಾರಿಗಳಾಗಿದ್ದಾರೆ. ಕರ್ಮದ ಫಲದಿಂದ ಈ ದೇಹವೇ ಆತ್ಮನೆಂದು, ತಾವೇ ಸ್ವತಂತ್ರರೆಂದು ತಿಳಿದು ಮತ್ತೆ ಮತ್ತೆ ಕರ್ಮಗಳನ್ನು ಮಾಡುತ್ತಲೇ ಇರುತ್ತಾರೆ. ಈ ಕರ್ಮಗಳ ಫಲವನ್ನು ಅನುಭವಿಸಲು, ಅದಕ್ಕನುಗುಣವಾದ ದೇಹವನ್ನು ಪಡೆದು ಮತ್ತೆ ಮತ್ತೆ ಸಂಸಾರಕ್ಕೆ ಬರುತ್ತಾರೆ. ಹೀಗೆ ಅನಾದಿಕಾಲದಿಂದ ಸಂಸಾರ ಪ್ರವಾಹದಲ್ಲಿರುವ ಜೀವರು ಯಾವುದೋ ಸುಕೃತದಿಂದ, ಈಶ್ವರನ ಅನುಗ್ರಹವನ್ನೂ, ಆಚಾರ್ಯರ ಉಪದೇಶವನ್ನೂ ಪಡೆದು ಅವರಿಂದ **ದೇಹ, ಆತ್ಮ, ಪರಮಾತ್ಮ** – ಈ ಮೂರು ತತ್ತ್ವಗಳ ಯಥಾರ್ಥ ಜ್ಞಾನವನ್ನು ಪಡೆಯುತ್ತಾರೆ. ಇದನ್ನೇ **'ತತ್ತ್ವಜ್ಞಾನ'** ಎನ್ನುವುದು. ತದನಂತರ ಮೋಕ್ಷೋಪಾಯವನ್ನು ಅನುಷ್ಠಾನಮಾಡಿ, ಕರ್ಮಬಂಧವನ್ನು ಪೂರ್ಣವಾಗಿ ಬಿಡಿಸಿಕೊಂಡು, ಈಶ್ವರನ ಅನುಗ್ರಹದಿಂದಲೇ ಪರಮಪದವನ್ನು ಸೇರಿ, ಅವನ ನಿತ್ಯ ಕೈಂಕರ್ಯವನ್ನು ಹೊಂದುತ್ತಾರೆ. ಮತ್ತೆ ಅವರಿಗೆ ಕರ್ಮಬಂಧನ ವಿಲ್ಲದ್ದರಿಂದ ಅವರು ಸಂಸಾರಿಗಳಾಗುವುದಿಲ್ಲ.

ಯಾಮುನಾಚಾರ್ಯರು ಜೀವನ ಲಕ್ಷಣವನ್ನು **ದೇಹೇಂದ್ರಿ ಯಮನಃಪ್ರಾಣಧೀಭ್ಯೋಽನ್ಯೋ ಅನನ್ಯಸಾಧನಃ । ನಿತ್ಯೋ ವ್ಯಾಪೀ ಪ್ರತಿಕ್ಷೇತ್ರಂ ಆತ್ಮಾ ಭಿನ್ನಃ ಸ್ವತಃ ಸುಖೀ ॥** ಎಂಬುದಾಗಿ ತಿಳಿಸಿದ್ದಾರೆ. ಜೀವರು ನಿತ್ಯರು, ಅನೇಕರು ಮತ್ತು ದೇಹ ಇಂದ್ರಿಯ ಮನಸ್ಸು ಬುದ್ಧಿ – ಇವುಗಳಿಗಿಂತ ಭಿನ್ನರು. ಇವರು ಜ್ಞಾನಾನಂದ ಸ್ವರೂಪ ರಾಗಿರುವವರು ಮತ್ತು ಕರ್ತೃತ್ವವುಳ್ಳವರು. ಇವರಲ್ಲಿ ಮೂರು ವಿಧ: ಬದ್ಧರು, ನಿತ್ಯರು ಮತ್ತು ಮುಕ್ತರು. ಬದ್ಧರು ಸಂಸಾರದಲ್ಲಿರುವವರು. ಮುಕ್ತರು ಕರ್ಮಬಂಧವನ್ನು ಬಿಡಿಸಿಕೊಂಡು ಮೋಕ್ಷಪಡೆದವರು. ನಿತ್ಯರು ಎಂದಿಗೂ ಕರ್ಮಬಂಧವನ್ನೇ ಹೊಂದದವರು. ಇದೆಲ್ಲ ದಕ್ಕೂ ವೇದಗಳಲ್ಲಿಯೇ ಪ್ರಮಾಣಗಳಿವೆ. **'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ'** ಎಂಬ ಶ್ರುತಿವಾಕ್ಯವೇ ನಿತ್ಯರು ಗಳು ಇರುವರೆಂಬುದಕ್ಕೆ ಪ್ರಮಾಣ. **'ನಿರಂಜನಃ ಪರಮಂ**